ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನೀಯರರು(ವಿ),
ಕಾ ಮತ್ತು ಪಾ ವೃತ್ತ, ಹುವಿಸಕಂನಿ.
ನೆಹರು ನಗರ, ಬೆಳಗಾವಿ-590 010.
ದೂರವಾಣಿ ಸಂಖ್ಯೆ: (0831) 2470351
ಫ್ಯಾಕ್ಸ ಸಂಖ್ಯೆ: (0831) 2472493

HUBLI ELECTRICITY SUPPLY COMPANY LIMITED
(Wholly Owned Govt of Karnataka Undertaking)
Superintending Engineer Ele.,
O&M Circle, HESCOM.,
Nehru Nagar, Belagavi-590010.
Website: www.hescom.co.in
E-Mail ID: seebgm.hescom@gmail.com

CORPORATE IDENTITY NUMBER(CIN): U31401KA2002SGC030437

ಕ್ರ.ಸಂ:ಬೆ/ಅಅ(ವಿ)/ಉಲೆನಿ/ಸಲೆ/2021-22/ 6048-53 ದಿನಾಂಕ: 18 JAN 2022

**ಗ್ರಾಹಕರ ಕುಂದು ಕೊರತೆಗಳ ನಿವಾರಣೆ ವೇದಿಕೆ**
**ಕಾರ್ಯ & ಪಾಲನೆ ವೃತ್ತ ಹುವಿಸಕಂನಿ, ಬೆಳಗಾವಿ, ಬೆಳಗಾವಿ ಜಿಲ್ಲೆ.**

ಪ್ರಕರಣ ಸಂಖ್ಯೆ: 23/2021

ವೇದಿಕೆಯ ಸದಸ್ಯರು:

1) ಶ್ರೀ ಗಿರಿಧರ ಕುಲಕರ್ಣಿ , ಅಧೀಕ್ಷಕ ಇಂಜಿನೀಯರ(ವಿ), ಕಾರ್ಯ & ಪಾಲನೆ ವೃತ್ತ ಹುವಿಸಕಂನಿ, ಬೆಳಗಾವಿ ಹಾಗೂ ವೇದಿಕೆಯ ಅಧ್ಯಕ್ಷರು.
2) ಶ್ರೀ ಶರೀಫುದೀನ್ ಅಹ್ಮದ, ಉಪಲೆಕ್ಕ ನಿಯಂತ್ರಣಾಧಿಕಾರಿ ಕಾರ್ಯ & ಪಾಲನೆ ವೃತ್ತ ಹುವಿಸಕಂನಿ, ಬೆಳಗಾವಿ ಹಾಗೂ ವೇದಿಕೆಯ ಸದಸ್ಯರು.
3) ಶ್ರೀ ಚಂದ್ರಕಾಂತ ಟಿ ಮಜಗಿ , ವಕೀಲರು, ಸದಸ್ಯರು

ಶ್ರೀ ಅಶೋಕ ಎನ್. ಬುದ್ನೂರ & ವೃಷಭೇಂದ್ರ ಎನ್. ಬುದ್ನೂರ
ಸಾ\\ ದೇವರಶೀಗೆ ಹಳ್ಳಿ
ತಾ\\ ಕಿತ್ತೂರ ಜಿ\\ ಬೆಳಗಾವಿ

------------------- ದೂರುದಾರರು

ವಿರುದ್ಧ

ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್(ವಿ)
ಕಾರ್ಯ & ಪಾಲನೆ ಉಪವಿಭಾಗ ಹುವಿ'ಸಕಂನಿ
ಕಿತ್ತೂರ

--------------- ಪ್ರತಿವಾದಿ

ಶ್ರೀ ಅಶೋಕ ಎನ್. ಬುದ್ನೂರ & ವೃಷಭೇಂದ್ರ ಎನ್. ಬುದ್ನೂರ ಸಾ\\ ದೇವರಶೀಗೆಹಳ್ಳಿ ತಾ\\ ಕಿತ್ತೂರ ಜಿ\\ ಬೆಳಗಾವಿ(ಗ್ರಾಹಕರ ಕುಂದುಕೊರತೆ ನಿವಾರಣೆ ವೇದಿಕೆ & ಒಂಬಡ್ಸಮನ್ ) ನಿಭಂಧನೆಗಳು 2004 ರ ಅಡಿಯಲ್ಲಿ ಒದಗಿಸಿದ ಅವಕಾಶಗಳ ಅಡಿಯಲ್ಲಿ ತಮ್ಮ ದೂರನ್ನು ವೇದಿಕೆಗೆ ಸಲ್ಲಿಸಿರುವರು.

2 **<u>ಪ್ರಕರಣದ ಸಾರಾಂಶ</u>**

i) ಕಿತ್ತೂರ ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ದೇವರಶೀಗೆಹಳ್ಳಿ ಗ್ರಾಮದ ಶ್ರೀ ವೃಷಬೇಂದ್ರ ಎನ್. ಬುದ್ನೂರ ಇವರ ಸ್ಥಾವರ ಸಂಖ್ಯೆ: DSLAEH-17278 (LT-2 ಜಕಾತಿ ಇರುತ್ತದೆ) ಈ ಸ್ಥಾವರಕ್ಕೆ ದಿನಾಂಕ: 17.04.2021 ರಂದು ಜಾಗೃತದಳ ಹೆಸ್ಕಾಂ ಬೆಳಗಾವಿ ರವರು ಇವರ ಸ್ಥಾವರಕ್ಕೆ ಅನಿರಿಕ್ಷಿತವಾಗಿ ಭೇಟಿ ನೀಡಿ ಪರಿಶೀಲಿಸಿದಾಗ, ಶ್ರೀ ವೃಷಬೇಂದ್ರ ಎನ್. ಬದ್ನೂರ ರವರು ಸ್ಥಾವರ ಸಂಖ್ಯೆ: DSLAEH-17278 ರ ವಿದ್ಯುತ್‌ನ್ನು ಅನಾಧಿಕೃತಕವಾಗಿ ಕಟ್ಟಡ ಕೆಲಸಕ್ಕೆ ಉಪಯೋಗಿಸುತ್ತಿರುವುದನ್ನು ಕಂಡು ಹಿಡಿದ (ಗುನ್ನ ನಂ: 422/2021 ) ದಿನಾಂಕ: 17.04.2021

ರಂದು ಪ್ರಕರಣ ದಾಖಲಿಸಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಉಪವಿಭಾಗ ಕಿತ್ತೂರ ರವರು ಸದರಿ ಸ್ಥಾವರಕ್ಕೆ ರೂ.11.700/- ಹಿಂದಾಕರಣೆ ಬಿಲ್ಲನ್ನು ಗ್ರಾಹಕರಿಗೆ ಸಲ್ಲಿಸಿರುತ್ತದೆ.

ದೂರುದಾರರು ಈ ವೇದಿಕೆಗೆ ದಿನಾಂಕ: 06.08.2021 ರಂದು ತಮ್ಮ ಆರ್.ಆರ್ ಸಂಖ್ಯೆ: DSLAEH-17278ಗೆ ಜಕಾತಿಯ ದುರ್ಬಳಕೆ ಎಂದು ದಿನಾಂಕ: 14.06.2021 ರಂದು ಹಿಂದಾಕರಣೆಯ ಬಿಲ್ಲು ರೂ.11.700/- ನ್ನು ನೀಡಿರುತ್ತಾರೆ, ಎಂದು ದೂರದಾರರು ಇದನ್ನು ಆಕ್ಷೇಪಿಸಿ ವಿಷಯವನ್ನು ಇತ್ಯರ್ಥ ಪಡಿಸುವಂತೆ ವೇದಿಕೆಗೆ ದೂರನ್ನು ದಾಖಲಿಸುತ್ತಾರೆ.

ii) ಸದರೀ ದೂರ ಕುರಿತು ದಿನಾಂಕ: 11.10.2021 ರಂದು ಸಮಯ 03:00 ಅಪರಾಹ್ನ ಮತ್ತು ದಿನಾಂಕ: 11.11.2021 ಸಮಯ 03:00 ಅಪರಾಹ್ನ ವಿಚಾರಣೆಯನ್ನು ದೂರುದಾರರು & ಪ್ರತಿ ವಾದಿಯರ ಜೊತೆಗೆ ಹಾಜರಿದ್ದು ವಿಚಾರಣೆ ನಡೆಸಲಾಯಿತು.

3.) <u>ದೂರದಾರರು ಸಲ್ಲಿಸಿರುವ ಲಿಖಿತ ಹೇಳಿಕೆ ವಿವರ.</u>

i) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಉಪವಿಭಾಗ ಕಿತ್ತೂರ ರವರು ದಿನಾಂಕ: 13.07.2021 ರಂದು ಕೊಟ್ಟ ನೋಟಿಸಿನಲ್ಲಿ ಇರುವ ವಿಷಯಗಳು ಸತ್ಯಕ್ಕೆ ದೂರವಾಗಿರುತ್ತದೆ. ಹಾಗೂ ನೋಟಿಸನಲ್ಲಿ ಹೇಳಿದ ವಿಷಯ ಸಂಪೂರ್ಣ ಅಸತ್ಯದಿಂದ ಕೂಡಿರುತ್ತದೆ ಮತ್ತು ವಿದ್ಯುತ್ ಸ್ಥಾವರವನ್ನು ಯಾವುದೇ ತರಹ ದುರುಪಯೋಗವಾಗಿ ಬಳಸಿಕೊಂಡಿರುದಿಲ್ಲಾ.

ii) ದಿನಾಂಕ: 14.06.2021 ಕ್ರ ಸಂಖ್ಯೆ: ಎಂ.ಕೆ.ಹು/ಶಾ.ಅ(ವಿ)/ಹಿ.ಸ/584-86 ತಾತ್ಪೂರ್ತಿಕ ಬಿಲ್ಲಿನ ಪ್ರಕಾರ ನಾನು ನನ್ನ ಮೀಟರ ಸಂಖ್ಯೆ ಡಿ.ಎಸ್.ಎಲ್.ಎ.ಇ.ಎಚ್-17278 ದಿಂದ ಸಂಖ್ಯೆ 422/21 ದಿನಾಂಕ: 17.04.2021 ರ ಪ್ರಕಾರ ಎಲ್.ಟಿ-2 ರಿಂದ ಎಲ್.ಟಿ-7 ಜಕಾತಿಯಲ್ಲಿ ಉಪಯೋಗಿಸಿರುವುದಿಲ್ಲ. ಮತ್ತು ಸದರಿ ಬಿಲ್ಲಿನಲ್ಲಿ ಯಾವಾಗ ತಪಾಸಣೆ ಮಾಡಿದರು ಎಂದು ಹೇಳಿರುವುದಿಲ್ಲ.

iii) ಸಹಾಯಕ ಕಾರ್ಯನಿರ್ವಾಹಕ ಅಭೀಯಂತರರು(ವಿ) ಕಾರ್ಯ ಮತ್ತು ಪಾಲನಾ ಉಪವಿಭಾಗ ವೃತ್ತ ಹು.ವಿ.ಸ.ಕಂ.ನಿ., ಕಿತ್ತೂರ ಜಿಲ್ಲಾ ಬೆಳಗಾವಿ ಇರುವ ಕೊಟ್ಟ ನೋಟಿಸಿನ 5ನೇ ಪ್ಯಾರಾದಲ್ಲಿ ಹೇಳಿರುವಂತೆ ಡಿ.ಎಸ್.ಎಲ್.ಎ.ಇ.ಎಚ್-17278 ಮೇಲೆ ಅನಧೀಕೃತವಾಗಿ 746 ವ್ಯಾಟ ವಿದ್ಯುತ್‌ನ್ನು ಉಪಯೋಗಿಸಿರುವದು ಪರಿಶೀಲನೆ ಸಮಯದಲ್ಲಿ ಕಂಡು ಬಂತು ಎನ್ನುವುದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ.

iv) ನನ್ನ ಅಣ್ಣ ಸದರಿ ವಿದ್ಯುತ್ ಸ್ಥಾವರಕ್ಕೆ ಸಂಬಂಧಿಸಿದಂತೆ ದಿನಾಂಕ: 06.02.2021 ರಂದು ಹಿರಿಯ ಸಹಾಯಕರು ಕಾರ್ಯ ಮತ್ತು ಪಾಲನೆ ಶಾಖೆ ಹು.ವಿ.ಸ.ಕಂ.ನಿ., ಎಂ.ಕೆ.ಹುಬ್ಬಳ್ಳಿ ಇವರ ಕಛೇರಿಯಲ್ಲಿ ಶುಲ್ಕವನ್ನು ಭರಣಾ ಮಾಡಿ ಸದರ ಮೀಟರ ಅನ್ನು ಪರಿಶೀಲಿಸಲು ಅರ್ಜಿಯನ್ನು ನೀಡಿರುವೆ. ತದ ನಂತರ ನನ್ನ ಅರ್ಜಿಯ ವಿನಂತಿಯ ಮೇರೆಗೆ ದಿನಾಂಕ: 24.02.2021 ರಂದು ಕಿರಿಯ ಅಭಿಯಂತರರು(ವಿ) ಎಲ್.ಟಿ ರೇಟಿಂಗ್ ಉಪವಿಭಾಗ ಬೈಲಹೊಂಗಲ ಇವರು ಸದರ ಸ್ಥಾವರಕ್ಕೆ ಭೆಟ್ಟಿ ನೀಡಿ ಮೀಟರ ಪರಿಶೀಲಿಸಿ ವರದಿಯನ್ನು ನೀಡಿರುವರು. ಹಾಗೂ ಆ ವರದಿಯ ಪ್ರಕಾರ ಹಿಂಬಾಕಿಯನ್ನು ಕಟ್ಟಿರುತ್ತೇನೆ. ಆದ್ದರಿಂದ ಮೀಟರ ರೀಡಿಂಗ್ ಹೆಚ್ಚಾಗಿ ತೋರಿಸುತ್ತದೆ ಮತ್ತು ಪ್ಯಾರಾ 6 ರಲ್ಲಿ ಹೇಳಿದಂತೆ ಎಲ್ಲ ವಿದ್ಯುತ್ ಬಿಲ್ಲನ್ನು ತುಂಬಿರುತ್ತೇನೆ ಯಾವುದೆ ಖಟಬಾಕಿಯನ್ನು ಇಟ್ಟುಕೊಂಡಿರುವದಿಲ್ಲ.

v) ಮಾನ್ಯರೆ, ನಾವು ಹೊಸ ಮನೆ ಕಟ್ಟುತ್ತಿದ್ದು ಅದನ್ನು ಕಟ್ಟಲು ಬೇಕಾಗಿರುವ ನೀರನ್ನು ಟ್ರ್ಯಾಕ್ಟರಿಗೆ ಅಳವಡಿಸಿರುವ ಟ್ಯಾಂಕರ ಮೂಲಕ ತರಿಸಿಕೊಂಡಿದ್ದು ಇರುತ್ತದೆ. ಮತ್ತು ಸದರಿ ಕಟ್ಟಡಕ್ಕೆ ನನ್ನ ವಿದ್ಯುತ್ ಸ್ಥಾವರದಿಂದ ಯಾವುದೇ ವಿದ್ಯುತ್‌ನ್ನು ಉಪಯೋಗಿಸಿಕೊಂಡಿರುವುದಿಲ್ಲ. ಕೇವಲ ಊಹೆ ಮಾಡಿ ತಪ್ಪು ಗುನ್ಹೆಯನ್ನು ದಾಖಲಿಸಿರುವದು ಕಂಡು ಬರುತ್ತದೆ.

ಆದ್ದರಿಂದ ಮಾನ್ಯರವರು, ಡಿ.ಎಸ್.ಎಲ್.ಎ.ಇ.ಎಚ್.-17278 ರ ಮೇಲಿರುವ ಸುಳ್ಳು ಆರೋಪ ಮಾಡಿರುವದನ್ನು ರದ್ದು ಮಾಡಬೇಕೆಂದು ತಮ್ಮಲಿ ವಿನಂತಿಸಿಕೊಳ್ಳುವ ವಿನಂತಿ ಅರ್ಜಿ.

4) ಪ್ರತಿವಾದಿ ಸಲ್ಲಿಸಿರುವ ಹೇಳಿಕೆಯ ವಿವರ:

i) ಕಿತ್ತೂರ ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ಶ್ರೀ.ವೃಷಭೇಂದ್ರ ಎನ್. ಬುದ್ನೂರ ಸ\\ದೇವರಶೀಗಿಹಳ್ಳಿ ಇವರು ಕಿತ್ತೂರ ತಾಲೂಕ ದೇವರಶೀಗಿಹಳ್ಳಿ ಗ್ರಾಮದಲ್ಲಿ 5 ಕೋಣೆಯ ನೆಲ ಅಂತಸ್ತಿನ ಆರ್.ಸಿ.ಸಿ ಮನೆಯನ್ನು ಕಟ್ಟುತ್ತಿರುತ್ತಾರೆ.

ii) ಶ್ರೀ ವೃಷಭೇಂದ್ರ ಎನ್.ಬುದ್ನೂರ ಸ\\ದೇವರಶೀಗಿಹಳ್ಳಿ ಇವರು ಹೊಸದಾಗಿ ಕಟ್ಟುತ್ತಿರುವ ಮನೆಯ ಪಕ್ಕದಲ್ಲಿ ಇವರದೇ ಮನೆಯಿದ್ದು ಅದರ ಸ್ಥಾವರ ಸಂಖ್ಯೆ: DSLAEH-17278 ((LT-2 ಜಕಾತಿ) ಇರುತ್ತದೆ. ಈ ಮನೆಯಲ್ಲಿ ಶ್ರೀ ವೃಷಭೇಂದ್ರ ಎನ್. ಬುದ್ನೂರ ಹಾಗೂ ಅವರ ಕುಟುಂಬ ವಾಸವಾಗಿರುತ್ತದೆ. ಈ ಮನೆಯ ಮುಂದೆ ಒಂದು ಕೊಳವೆ ಬಾವಿಯಿದ್ದು ಇದಕ್ಕೆ ಸ್ಥಾವರ ಸಂಖ್ಯೆ: DSLAEH-17278 ರ ಮಾಪಕದ ಮೇಲೆ ವಿದ್ಯುತ್ ಸಂಪರ್ಕ ಇರುತ್ತದೆ.

iii) ದಿನಾಂಕ: 17.04.2021 ರಂದು ಜಾಗೃತದಳ ಹೆಸ್ಕಾಂ ಬೆಳಗಾವಿ ರವರು ಶ್ರೀ ವೃಷಭೇಂದ್ರ ಎನ್.ಬುದ್ನೂರ ಇವರ ಸ್ಥಾವರಕ್ಕೆ ಅನಿರೀಕ್ಷಿತವಾಗಿ ಭೇಟಿನೀಡಿ ಪರಿಶೀಲಿಸಿದಾಗ ಶ್ರೀ ವೃಷಭೇಂದ್ರ ಎನ್.ಬುದ್ನೂರ ರವರು ವಿದ್ಯುತ್‌ನ್ನು ಉಪಯೋಗಿಸುತ್ತಿರುವುದನ್ನು ಪರಿಶೀಲನೆ ವೇಳೆ ತನಿಖಾಧಿಕಾರಿಗಳು ಪತ್ತೆ ಹಚ್ಚಿರುತ್ತಾರೆ.

iv) ಹೆಸ್ಕಾಂ ಜಾಗೃತದಳ ಬೆಳಗಾವಿ ರವರು ಶ್ರೀ ವೃಷಭೇಂದ್ರ ಎನ್.ಬುದ್ನೂರ ಇವರು ಸ್ಥಾವರ ಸಂಖ್ಯೆ: DSLAEH-17278 ರ ವಿದ್ಯುತ್ ನ್ನು ಅನಧೀಕೃತವಾಗಿ ಕಟ್ಟಡ ಕೆಲಸಕ್ಕೆ ಉಪಯೋಗಿಸುತ್ತಿರುವುದನ್ನು ತನಿಖೆಯಿಂದ ಕಂಡುಹಿಡಿದು ಶ್ರೀ ವೃಷಭೇಂದ್ರ ಎನ್.ಬುದ್ನೂರ ಇವರ ವಿದ್ಯುತ್ ಸ್ಥಾವರದ ಮೇಲೆ (ಗುನ್ಹಾ ನಂ 422/2021) ದಿನಾಂಕ: 17.04.2021 ರಂದು ಪ್ರಕರಣ ದಾಖಲಿಸಿರುವರು.

v) ಜಾಗೃತದಳ ಪೋಲಿಸ್ ತನಿಖಾ ವರದಿ/ಮಹಜರ ವರದಿ ಆದಾರದ ಮೇಲಿಂದ ನಮ್ಮ ಕಛೇರಿಯಿಂದ ಪತ್ರ ಸಂಖ್ಯೆ: ಎಂ.ಕೆ.ಹು/ಶಾ.ಅ(ವಿ)/ಹಿ.ಸ/584-86 ದಿನಾಂಕ: 14.06.2021 ರನ್ವಯ ಸ್ಥಾವರ ಸಂಖ್ಯೆ: DSLAEH-17278 ಕ್ಕೆ ಸಂಬಂಧಿಸಿದಂತೆ ಹಿಂದಾಕರಣೆ ಬಿಲ್ಲ ರೂ. 11,700/- ನಿಗದಿಪಡಿಸಿ ನೋಟಿಸನ್ನು ನೀಡಲಾಗಿರುತ್ತದೆ.

vi) ಸದರಿ ಸ್ಥಾವರದ ಹಿಂದಾಕರಣೆ ಬಿಲ್ಲಿನ ಹಾಗೂ ಜಾಗೃತದಳ ಪೋಲಿಸ್ ರವರ ಪ್ರಕರಣದ ಕುರಿತು ಗ್ರಾಹಕರು ಶಿವಪುತ್ರಪ್ಪ ನಿ. ಘಟಕಳ ವಕೀಲರ ಮುಖಾಂತರ ಕಾಯ್ದೆ ಬದ್ಧ ಪ್ರತ್ಯುತ್ತರ ನೋಟಿಸನ್ನು ದಿನಾಂಕ: 13.07.2021 ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ಉಪ ವಿಭಾಗ ಹೆಸ್ಕಾಂ ಕಿತ್ತೂರ ರವರ ಕಛೇರಿಗೆ ಸಲ್ಲಿಸಿರುತ್ತಾರೆ.

vii) ದಿನಾಂಕ: 29.07.2021 ರಂದು ವ್ಹಿ.ಕೆ ಪಾಟೀಲ ವಕೀಲರು ಬೆಳಗಾವಿ (ಹೆಸ್ಕಾಂ ಇಲಾಖೆಯಿಂದ ನೇಮಿಸಿದ ವಕೀಲರು) ಇವರ ಮುಖಾಂತರ ಶ್ರೀ ಶಿವಪುತ್ರ ಘಟಕಳ ವಕೀಲರು ಬೆಳಗಾವಿ ಹಾಗೂ ಶ್ರೀ ವೃಷಭೇಂದ್ರ ಎನ್. ಬುದ್ನೂರ ಸಾ\\ ದೇವರಶೀಗಿಹಳ್ಳಿ ಇವರಿಗೆ ಸದರಿ ಪ್ರಕರಣ ಕುರಿತು ನೋಟಿಸಿಗೆ ವಿವರವಾದ ಉತ್ತರವನ್ನು ನೀಡಲಾಗಿರುತ್ತದೆ.

viii) ತಮ್ಮ ಕಛೇರಿ ಪತ್ರ ಸಂಖ್ಯೆ: ಬೆ/ಗ್ರಾವೆ/ಅಇಂ(ವಿ)/ಉಲೆನಿ/ಹಿಸ-2/2021-22/2711-13 ದಿನಾಂಕ:17.08.2021 ರಲ್ಲಿ ಸೂಚಿಸಿದ ಪ್ರಕಾರ ದಿನಾಂಕ: 25.08.2021 ರಂದು ಶ್ರೀ ವೃಷಬೇಂದ್ರ ಎನ್. ಬುದ್ನೂರ ಸಾ// ದೇವರಶೀಗಿಹಳ್ಳಿ ರವರ ಸ್ಥಾವರಕ್ಕೆ ಬೇಟಿ ನೀಡಿ ಪರಿಶೀಲನೆ ಮಾಡಿದಾಗ ಈ ಕೆಳಗಿನ ಸಂಗತಿಗಳು ಕಂಡುಬಂದಿರುತ್ತವೆ.

- ಶ್ರೀ ವೃಷಭೇಂದ್ರ ಎನ್. ಬುದ್ನೂರ ರವರು ತಾವಿರುವ ಸ್ವಂತ ಮನೆಯ ಪಕ್ಕದಲ್ಲಿ (ಸುಮಾರ 3 ರಿಂದ 4 ಅಡಿ ಅಂತರ) 5 ಕೋಣೆಗಳುಳ್ಳ ನೆಲ ಅಂತಸ್ತಿನ ಆರ್.ಸಿ.ಸಿ ಮನೆಯನ್ನು ಕಟ್ಟುತ್ತಿದ್ದಾರೆ. ತಾವಿರುವ ಮನೆಯ ಮುಂದೆ ಕೊಳವೆ ಬಾವಿ ಇದ್ದು ಸದರಿ ಕೊಳವೆ ಬಾವಿಗೆ ಈಗಾಗಲೇ ವಿದ್ಯುತ್ ಮಂಜೂರಾತಿ ಪಡೆದಿರುವ ಮನೆಯ ಸ್ಥಾವರದ ಮಾಪಕದ ಮೇಲಿಂದ ವಿದ್ಯುತ್ ಸಂಪರ್ಕವನ್ನು ಪಡೆದಿರುತ್ತಾರೆ.

* ಜಾಗೃತದಳ ಬೆಳಗಾವಿ ರವರು ದಿನಾಂಕ: 17.04.2021 ರಂದು ಭೇಟಿ ನೀಡಿದ ಸಮಯದಲ್ಲಿ ಹೊಸದಾಗಿ ಕಟ್ಟುತ್ತಿರುವ ಮನೆಗೆ ಶ್ರೀ ವೃಷಭೇಂದ್ರ ಎನ್. ಬುದ್ನೂರ ರವರು ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಪಡೆದಿರುವುದಿಲ್ಲ.
* ಹೊಸದಾಗಿ ಕಟ್ಟುತ್ತಿರುವ ಮನೆಯನ್ನು ಪರಿಶೀಲನೆ ಮಾಡಲಾಗಿ ಮನೆ ಕಟ್ಟುತ್ತಿರುವ ಸಂದರ್ಭದಲ್ಲಿ ವಿದ್ಯುತ್ತಿನ ಅವಶ್ಯಕತೆ ಇರುವುದಾಗಿ (ನೀರು ಉಪಯೋಗಕ್ಕೆ ) ಕಂಡುಬಂದಿರುತ್ತದೆ.
* ದಿನಾಂಕ: 25.08.2021 ರಂದು ಪರಿಶೀಲನೆ ಸಮಯದಲ್ಲಿ ಹೊಸ ಮನೆ ಕಟ್ಟಡದ ಕೆಲಸಕ್ಕೆ ಬೇಕಾಗಿರುವ ನೀರನ್ನು ಟ್ಯಾಕ್ಟರಗೆ ಅಳವಡಿಸಿರುವ ಟ್ಯಾಂಕರ್ ಮೂಲಕ ತರಿಸಿಕೊಂಡಿದ್ದು ಇರುತ್ತದೆ ಎಂದು ಗ್ರಾಹಕರು ತಿಳಿಸಿರುತ್ತಾರೆ.
* ದೇವರಶೀಗಿಹಳ್ಳಿ ಗ್ರಾಮದಲ್ಲಿ ನೀರಿನ ಟ್ಯಾಂಕರ್ ಬಗ್ಗೆ ವಿಚಾರಿಸಿದಾಗ ಗ್ರಾಮದಲ್ಲಿ ಟ್ಯಾಂಕರಗೆ ಅಳವಡಿಸಿರುವ ಟ್ಯಾಂಕರ್ ಮುಖಾಂತರ ನೀರನ್ನು ಸರಬರಾಜು ಮಾಡುವ ಯಾವುದೇ ವಾಹನ ಇರುವುದಿಲ್ಲ ಎಂಬುದು ತಿಳಿದುಬಂದಿರುತ್ತದೆ.
* ದಿನಾಂಕ: 17.04.2021 ರಂದು ಜಾಗೃತದಳ ಹೆಸ್ಕಾಂ ಬೆಳಗಾವಿ ರವರು ದೇವರಶೀಗಿಹಳ್ಳಿ ಗ್ರಾಮದ ಶ್ರೀ ವೃಷಭೇಂದ್ರ ಎನ್. ಬುದ್ನೂರ ರವರ ಸ್ಥಾವರಕ್ಕೆ ಭೇಟಿ ನೀಡಿ ವಿದ್ಯುತ್ ನ್ನು ಅನಧೀಕೃತವಾಗಿ ಕಟ್ಟಡ ಕೆಲಸಕ್ಕೆ ಉಪಯೋಗಿಸುತ್ತಿರುವುದನ್ನು ಕಂಡು ಹಿಡಿದು ಪ್ರಕರಣ ದಾಖಲಿಸಿದ ನಂತರ ಕಟ್ಟಡ ಕಟ್ಟಲು ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಪಡೆದಿರುತ್ತಾರೆ. ಆರ್.ಆರ್.ನಂ: MKHTEMP-1323 ಇರುತ್ತದೆ.

ಈ ಮೇಲಿನ ಎಲ್ಲ ಸಂಗತಿಗಳನ್ನು ಗಮನಿಸಿದಾಗ ದಿನಾಂಕ: 17.04.2021 ರಂದು ಜಾಗೃತದಳ ಅಧಿಕಾರಿಗಳು ಅನಿರೀಕ್ಷತವಾಗಿ ದೇವರಶೀಗಿಹಳ್ಳಿ ಗ್ರಾಮದ ಶ್ರೀ ವೃಷಭೇಂದ್ರ ಎನ್. ಬುದ್ನೂರ ರವರ ಮನೆಗೆ ಭೇಟಿ ನೀಡಿದಾಗ ಗ್ರಾಹಕರು ಹೊಸದಾಗಿ ಕಟ್ಟುತ್ತಿರುವ ಮನೆಗೆ ನೀರನ್ನು ಉಪಯೋಗಿಸಲು ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ತೆಗೆದುಕೊಳ್ಳದೇ ಈಗಿರುವ ಮನೆಯ ಸ್ಥಾವರದ ಮೇಲಿಂದ ಅನಧಿಕೃತವಾಗಿ ವಿದ್ಯುತ್‌ನ್ನು ಕೊಳವೆ ಬಾವಿ ನೀರೆತ್ತಲು ಉಪಯೋಗಿಸಿ ಕಟ್ಟಡ ನಿರ್ಮಾಣ ಮಾಡುತ್ತಿರುವುದಾಗಿ ತನಿಖಾಧಿಕಾರಿಗಳ ತನಿಖೆಯಿಂದ ಕಂಡುಹಿಡಿದು ವಿದ್ಯುತ್ ಸ್ಥಾವರ ಸಂಖ್ಯೆ: DSLAEH-17278 ರ ಮೇಲೆ ಗುನ್ಹಾ ನಂ: 422/2021 ರನ್ವಯ ಕೇಸ್ ದಾಖಲಿಸಿ, ರೂ 11.700/- ಗಳ ಹಿಂದಾಕರಣೆ ಬಿಲ್ಲನ್ನು ಮಾಡಿದ್ದು ಸರಿ ಇರಬಹುದೆಂದು ಅಂದಾಜಿಸಲಾಗಿದೆ. ಸದರಿ ಮಾಹಿತಿಯನ್ನು ತಮ್ಮ ದಯಾಪರ ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

## 5) <u>ವೇದಿಕೆಯು ಗಮನಿಸಿರುವ ಅಂಶಗಳು</u>

ಗ್ರಾಹಕರು ನೀಡಿದ ದೂರುಗಳು & ಹೇಳಿಕೆಗಳಲ್ಲಿ ದೂರುದಾರರು ಸ್ಥಾವರ ಸಂಖ್ಯೆ: DSLAEH-17278 ಗೆ ಜಕಾತಿ ದೂರು ಬಳಕೆ ಮಾಡಿರುವುದಿಲ್ಲಾ ಎಂದು ಲಿಖಿತವಾಗಿ ಹೇಳಿಕೆಯನ್ನು ನೀಡಿರುತ್ತದೆ, ಆದರೆ ಪ್ರತಿವಾದಿಗಳಾದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಉಪವಿಭಾಗ ಕಿತ್ತೂರ ರವರು ನೀಡಿರುವ ಲಿಖಿತ ಹೇಳಿಕೆ ದಿನಾಂಕ: 28.09.2021 ರಂದು ಗಮನಿಸಲಾಯಿತು. ಮತ್ತು ಸದರಿ ಪ್ರಕರಣಕ್ಕೆ ಸಬಂಧ ಪಟ್ಟ ಯಾವುದಾದರು ಪೋಟೂಚಾಯಾ ಪ್ರತಿಗಳು ಇದ್ದಲಿ ವೇದಿಕೆಗೆ ಸಲ್ಲಿಸಲು ವೇಧಿಕೆಯಲ್ಲಿ ಹಾಜರಿದ್ದ ಅಧ್ಯೇಕ್ಷರು ಮತ್ತು ಸದಸ್ಯರುಗಳು ಪ್ರತಿವಾದಿಗಳಾದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಉಪ-ವಿಭಾಗ ಕಿತ್ತೂರ ರವರಿಗೆ ತಿಳಿಸಲಾಯಿತು. ಆದರೆ ಪ್ರತಿವಾದಿಗಳಾದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಉಪ-ವಿಭಾಗ ಕಿತ್ತೂರ ರವರು ಪೋಟೂಚಾಯಾ ಪ್ರತಿಗಳು ಲಭ್ಯವಿರುವುದಿಲ್ಲಾ ಎಂದು ಮೂಖಿಕವಾಗಿ ತಿಳಿಸಿರುತ್ತಾರೆ.

ಮುಂಬುವರೆದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಕಿತ್ತೂರ ಉಪ-ವಿಭಾಗ ರವರ ಪತ್ರ ಸಂಖ್ಯೆ: 3778/29-12/2021 ರ ಪ್ರಕಾರ ದೂರುದಾರರಾದ ಶ್ರೀ ಅಶೋಕ ಎನ್. ಬುದ್ನೂರ ರವರು ದಿನಾಂಕ: 17.12.2021 ರಂದು ಗ್ರಾಹಕರ ಕೊಂದುಕೂರತೆ ನಿವಾರಣೆ ವೇಧಿಕೆಗೆ ಸಲ್ಲಿಸಿದ ಮೇಲ್ಮನವಿಯನ್ನು ಹಿಂಪಡೆದ ಪತ್ರವನ್ನು ಸಲ್ಲಿಸಿರುತ್ತಾರೆ. ಹಾಗೂ ಅವರ ಸ್ಥಾವರಕ್ಕೆ

ಹಿಂದಾಕರಣೆ ಮಾಡಿದ ಬಿಲ್ಲಿನ ಮೊತ್ತ ರೂ.11,700/- ನ್ನು ರಶೀದಿ ಸಂಖ್ಯೆ: 2157 ದಿನಾಂಕ: 17.12.2021 ರೂ. 10,000/- ಮತ್ತು ರಶೀದಿ ಸಂಖ್ಯೆ: 2158 ದಿನಾಂಕ: 17.12.2021 ರೂ 1700/- ನ್ನು ಕಿತ್ತೂರು ಉಪ-ವಿಭಾಗದಲ್ಲಿ ಪಾವತಿಸಿರುತ್ತಾರೆ, ಆದುದ್ದರಿಂದ ಈ ವೇದಿಕೆಯು ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಬೆ/ಗ್ರಾವೆ/ಅಇಂ(ವಿ)/ಉಲೆನಿ/ಹಿಸ-2/2021-22:** 6048-53

ಮೇಲಿನ ಅಂಶಗಳನ್ನು ಅವಲೋಕಿಸಿದಾಗ ದೂರದಾರರು ಸಲ್ಲಿಸಿದ ಮೇಲ್ಮನವಿಯನ್ನು ದಿನಾಂಕ: 17.12.2021 ರಂದು ಹಿಂಪಡೆದು ತಮ್ಮ ಸ್ಥಾವರ ಸಂಖ್ಯೆ: DSLAEH-17278 ಗೆ ಜಕಾತಿಯ ದುರ್ಬಳಿಕೆ ಹಿಂದಾಕರಣೆ ಬಿಲ್ಲಿನ ಮೊತ್ತ ರೂ. 11.700/- ನ್ನು ರಶೀದಿ ಸಂಖ್ಯೆ: 2157 ದಿನಾಂಕ: 17.12.2021 ರೂ. 10,000/- ಮತ್ತು ರಿಶೀದಿ ಸಂಖ್ಯೆ 2158 ದಿನಾಂಕ: 17.12.2021 ರೂ. 1700/- ನ್ನು ಕಿತ್ತೂರು ಉಪವಿಭಾಗದಲ್ಲಿ ಪಾವತಿಸಿರುವುದರಿಂದ ಈ ಪ್ರಕರಣವು ಇತ್ಯರ್ಥಗೊಳಿಸಿ ಆದೇಶಿಸಲಾಗಿದೆ.

| | | |
|---|---|---|
| 6/1/22 ( ಶರೀಫುದ್ದಿನ ಅಹ್ಮದ) | (ಚಂದ್ರಕಾಮತ ಟಿ ಮಜಗಿ) | (ಗಿರಿಧರ ಕುಲಕರ್ಣಿ) |
| ಉಪಲೆಕ್ಕ ನಿಯಂತ್ರಣಾಧಿಕಾರಿ ಹಾಗೂ ಗ್ರಾ.ಕು.ಕೊ.ನಿ.ವೇ.ಸದಸ್ಯರು ಕಾ & ಪಾ ವೃತ್ತ ಬೆಳಗಾವಿ | ಆಯೋಗದಿಂದ ನಿಯೋಜಿಸಲಾದ ಸದಸ್ಯರು | ಅಧ್ಯಕ್ಷರು , ಬೆಳಗಾವಿ ಜಿಲ್ಲೆ, ಗ್ರಾ.ಕುಂ.ಕೊ.ನಿ.ವೇದಿಕೆ ಹಾಗೂ ಅಧೀಕ್ಷಕ ಇಂಜಿನೀಯರ(ವಿ) ಕಾ & ಪಾ ವೃತ್ತ ಹೆಸ್ಕಾಂ ಬೆಳಗಾವಿ |

ಗೆ,

ಶ್ರೀ ಅಶೋಕ ಎನ್. ಬುದ್ನೂರ & ವೃಷಭೇಂದ್ರ ಎನ್. ಬುದ್ನೂರ
ಸಾ\\ ದೇವರಶೀಗೆಹಳ್ಳಿ ತಾ\\ ಕಿತ್ತೂರ ಜಿ\\ ಬೆಳಗಾವಿ

ಪ್ರತಿ:

1. ಮುಖ್ಯ ಇಂಜಿನೀಯರ(ವಿ), ಬೆಳಗಾವಿ ವಲಯ, ಹುವಿಸಕಂನಿ., ಬೆಳಗಾವಿ
2. ಪ್ರಧಾನ ವ್ಯವಸ್ಥಾಪಕರು (ಆ & ಮಾಸಂಅ)/(ತಾಂತ್ರಿಕ), ನಿಗಮ ಕಛೇರಿ, ಹುವಿಸಕಂನಿ, ಹುಬ್ಬಳ್ಳಿ.
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ವಿಭಾಗ, ಹುವಿಸಕಂನಿ., ರಾಯಭಾಗ ಇವರಿಗೆ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯ್(ವಿ), ಕಾ ಮತ್ತು ಪಾ ಉಪ ವಿಭಾಗ, ಹುವಿಸಕಂನಿ., ರಾಯಬಾಗ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ.